ಸಂಗದಲ್ಲಿ ಇರಬಹುದು. ಅಲ್ಲಾದರೋ ಮೂರ್ಖರೊಂದಿಗೆ ಇರಬೇಕು. ಇದೇ ಅಜಗಜಾಂತರ ವ್ಯತ್ಯಾಸ. ಈ ದೇಶದ ಜನರು ಕಲೆತು ಶಿಸ್ತಿನಿಂದ ಕೆಲಸ ಮಾಡುವರು. ಆದರೆ ನಮ್ಮ ಉದ್ಯಮಗಳಾದರೋ ಸೋಮಾರಿತನ, ಅರ್ಥವಿಲ್ಲದ ತ್ಯಾಗ, ಅಸೂಯೆ – ಇವುಗಳ ಸಂಪರ್ಕದಿಂದ ಎಲ್ಲವೂ ನಿಷ್ಪ್ರಯೋಜಕವಾಗುವುದು" ಎನ್ನುತ್ತಾರೆ. ಶಿಷ್ಯ ಅಳಸಿಂಗರಿಗೆ ಬರೆದ ಪತ್ರದಲ್ಲಿ, "ನಮ್ಮ ಹಿಂದೂಗಳಲ್ಲಿ ವ್ಯಾವಹಾರಿಕ ಬುದ್ಧಿ ಏನೇನೂ ಇಲ್ಲ. ಯಾವುದಾದರೂ ಕೆಲಸವನ್ನು ಮಾಡುತ್ತೇನೆ ಎಂದು ಮಾತು ಕೊಟ್ಟರೆ, ಸಕಾಲಕ್ಕೆ ಅದನ್ನು ಮಾಡಬೇಕು. ಇಲ್ಲದೇ ಇದ್ದರೆ ಜನರಿಗೆ ಅವರಲ್ಲಿರುವ ನಂಬಿಕೆ ಹೋಗುವುದು" ಎಂದಿದ್ದಾರೆ. ಪಾಶ್ಚಾತ್ಯರಲ್ಲಿರುವ ಸಹಭಾಗಿತ್ವ, ಕಾರ್ಯತತ್ಪರತೆ, ಕಾನೂನಿಗೆ ಅವರ ವಿಧೇಯತೆಗಳನ್ನು ನಮ್ಮ ದೇಶದ ವಿದ್ಯಮಾನಗಳಿಗೆ ಹೋಲಿಸುತ್ತ, ಅಂತಃಕಲಹ, ಅಸೂಯೆಯೇ ನಮ್ಮ ಜನಾಂಗವನ್ನು ನಾಶಮಾಡುವುದು ಎಂದು ನಿಟ್ಟುಸಿರುಬಿಟ್ಟಿದ್ದಾರೆ.

ಶ್ರೀಮತಿ ಮೃಣಾಳಿನಿ ಬೋಸ್‌ಗೆ ಡಿಸೆಂಬರ್ ೧೮೯೮ರಲ್ಲಿ ಬರೆದ ಪತ್ರದಲ್ಲಿ, ಪಾಶ್ಚಾತ್ಯ ಜನಜೀವನ, ಆಡಳಿತಕ್ಕೆ ನಮ್ಮ ದೇಶದ ಜೀವನವೈಖರಿಯನ್ನು ಹೋಲಿಸುತ್ತಾ, "ಭಾರತದಲ್ಲಿರುವುದು ಜಡ ಬದುಕು. ಮನುಷ್ಯರು ಜೀವವಿಲ್ಲದ ಯಂತ್ರದಂತೆ ಕೆಲಸ ಮಾಡುವಂತೆ ಎಲ್ಲವೂ ತೋರುತ್ತದೆ. ಇದರಲ್ಲಿ ಮಾನಸಿಕ ಚಟುವಟಿಕೆ ಇಲ್ಲ, ಹೃದಯ ವಿಕಾಸವಿಲ್ಲ, ಚೇತನದ ಚಿಹ್ನೆಯಿಲ್ಲ, ಆಶಾತರಂಗವಿಲ್ಲ, ಇಚ್ಛಾಶಕ್ತಿಯ ಪ್ರಬಲ ಉತ್ತೇಜನವಿಲ್ಲ, ತೀವ್ರ ಸುಖಾನುಭೂತಿಯಿಲ್ಲ, ನಿಕಟ ದುಃಖಸ್ಪರ್ಶವೂ ಇಲ್ಲ, ಹೊಸ ಹೊಸ ವಿಷಯಗಳನ್ನು ಕಂಡು ಹಿಡಿಯಬೇಕೆಂಬ ಬುದ್ಧಿವೈಭವದ ಚಲನೆ ಇಲ್ಲ. ಇಂತಹ ಮನಸ್ಸನ್ನು ಕವಿದಿರುವ ಮೋಡವು ಚೆದುರುವುದೇ ಇಲ್ಲ. ಪ್ರಾತಃಕಾಲದ ಸೂರ್ಯಕಿರಣಗಳ ಪ್ರಕಾಶಮಾನವಾದ ದೃಶ್ಯಗಳು ಈ ಹೃದಯವನ್ನು ಉಲ್ಲಾಸಗೊಳಿಸುವುದೇ ಇಲ್ಲ" ಎಂದು ನೊಂದುಕೊಳ್ಳುತ್ತಾರೆ. ಇದಕ್ಕಿಂತ ಬಿರುಸಾದ ಚಾಟಿಯ ಏಟು ಬೇಕೆ ನಮಗೆ, ನಮ್ಮ ಸ್ವಭಾವಗಳನ್ನು ತಿದ್ದಿಕೊಳ್ಳಲು?

ಸ್ವಾಮಿ ವಿವೇಕಾನಂದರು ಅಮೆರಿಕದ ಜನರು, ಅವರ ಮೂಲಭೂತ ಸಂಸ್ಕೃತಿ, ಹಣಕಾಸಿನ ಆಡಳಿತ ವೈಖರಿ, ಕೈಗಾರಿಕೆ, ಶೈಕ್ಷಣಿಕ ಕ್ಷೇತ್ರದ ವೈಚಾರಿಕತೆ, ಲಲಿತಕಲೆಯ ವಸ್ತುಪ್ರದರ್ಶನಗಳ ಬಗ್ಗೆ ವಿಸ್ತೃತವಾಗಿ ತಮ್ಮ ಪತ್ರಗಳಲ್ಲಿ ಬರೆಯುತ್ತಾರೆ. ವಿಜ್ಞಾನ, ಆರೋಗ್ಯ, ಸಮಾಜ ಸುಧಾರಣೆಗಳ ವಿಷಯದಲ್ಲಿ ಅಮೆರಿಕನ್ನರು ತೋರಿರುವ ಪ್ರಗತಿಯ ಬಗ್ಗೆ ಪ್ರಶಂಸಾತ್ಮಕವಾಗಿ ಬರೆಯುತ್ತ, "ಅಲ್ಲಿ ಅವರು ದೈವತ್ವ, ಭ್ರಾತೃತ್ವಗಳನ್ನು ವಾಸ್ತವವಾಗಿ ತಮ್ಮ ಜೀವನ ಹಾಗೂ ಕಾರ್ಯವೈಖರಿಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಹಾಗಾಗಿ ಅವರು ಬಹಳ ದೊಡ್ಡವರಾಗಿಯೂ ಬೆಳೆದಿದ್ದಾರೆ. ಆದರೆ, ಭಾರತದಲ್ಲಿ ಅದು ಪಾಠಪ್ರವಚನಗಳಲ್ಲಿ ಮಾತ್ರ ನೋಡಲು ಸಿಗುತ್ತದೆ, ವಾಸ್ತವದ ಜೀವನದಲ್ಲಲ್ಲ" ಎನ್ನುತ್ತಾರೆ.

ವಿವೇಕಾನಂದರು ಅವರ ವಿದೇಶದ ಅನುಭವದ ಹಿನ್ನೆಲೆಯಲ್ಲಿ ದೇಶೀಯ ಸಮಸ್ಯೆಗಳ ಮೂಲಕಾರಣಗಳ ಮೇಲೆ ಕ್ಷ–ಕಿರಣ ಬೀರಿ ಸಮಸ್ಯೆಗಳನ್ನು ಎದುರಿಸಲು ಮಾರ್ಗದರ್ಶನವನ್ನು ಮಾಡಿದ್ದಾರೆ. ಅದರ ಬಗ್ಗೆ ಆ ಕಾಲದ ಜನರಿಗೆ ಎಚ್ಚರ ಹುಟ್ಟಿರುವುದು ನಿಜ. ಹೀಗಾಗಿಯೇ ಸ್ವಾಮಿ ವಿವೇಕಾನಂದರ ಪ್ರೇರಣೆಯಿಂದ ಹುಟ್ಟಿದ ಅನೇಕ ಸಂಘಸಂಸ್ಥೆಗಳಲ್ಲಿ ರಾಷ್ಟ್ರನಿರ್ಮಾಣ, ರಾಷ್ಟ್ರಪ್ರೇಮ, ಚಾರಿತ್ರ್ಯ ನಿರ್ಮಾಣ ಶಿಕ್ಷಣ, ಜಾತಿ ವೈಷಮ್ಯರಹಿತ ಸಮಾನತೆ – ಇವುಗಳ ಪರಿಣಾಮಕಾರಿ ಅನುಷ್ಠಾನದ ಕಳಕಳಿಯನ್ನು ಕಾಣುತ್ತೇವೆ.


ಜಾಗತೀಕರಣದ ಹಿನ್ನೆಲೆಯಲ್ಲಿ ಭಾರತ ದೇಶವು ಸಾಕಷ್ಟು ಸಾಧನೆಯನ್ನು ಮಾಡಿದ್ದರೂ ಸಹ ಆ ಯಶಸ್ಸು ಕೇವಲ ಕೆಲವೇ ಉದ್ಯಮಗಳಲ್ಲಿ ಸೃಜನಶೀಲವಾಗಿದೆ; ಹಣದ ದಾಹ ಎಲ್ಲರಲ್ಲಿ ಹೆಚ್ಚಿದೆ; ಹಣ ಅಂತಸ್ತುಗಳೇ ಸಮಾಜದಲ್ಲಿ ಪ್ರತಿಷ್ಠಿತರೆನ್ನಿಸಿಕೊಳ್ಳುವುದಕ್ಕೆ ಮಾನದಂಡವಾಗಿದೆ. ಕೆಲವೊಮ್ಮೆ, ಮಹಾತ್ಮರ ಮಾರ್ಗದರ್ಶನವನ್ನು ಕೇಳಿಪಡೆದರೂ, ತಿದ್ದಿಕೊಳ್ಳದ ನಮ್ಮ ಸಮಾಜದ ಜಡತೆಯನ್ನು ಕಂಡಾಗ ಡಿ.ವಿ.ಜಿಯವರ ಪದ್ಯವೊಂದು ನೆನಪಿಗೆ ಬರುತ್ತದೆ:

**ಜಗವ ತಿದ್ದುವೆನೆಂದು ಹೊರಟು ಗೆದ್ದವರಾರು?**
**ಕಾಕುತ್ಸ್ಥನೆ, ಶ್ರೀಕೃಷ್ಣನೆ, ಬುದ್ಧ, ಜಿನರೆ**
**ಸೋಕ್ರತೀಸನೆ, ಏಸುವೆ, ಮೋಸೆಸನೆ,**
**ಮೊಹಮ್ಮದನೆ, ಒಪ್ಪಿತದು ಯಾರನದು?**

ಈ ಮಾತುಗಳನ್ನು ಇಂದು ನಾವು ಸುಳ್ಳುಮಾಡಬೇಕಾಗಿದೆ. ಅದಕ್ಕೆ ಕಂಕಣ ತೊಡಬೇಕಾಗಿದೆ. ಜಗತ್ತಿನಲ್ಲಿರುವ ಮಾನವರೆಲ್ಲರೂ ಒಂದೇ; ಒಬ್ಬರ ಒಳಿತಿನಲ್ಲಿ ಇನ್ನೊಬ್ಬನ ಒಳಿತಿದೆ; ಸಮಾಜದ, ರಾಷ್ಟ್ರದ ಒಳಿತಿದೆ ಎಂದು ಅರಿಯಬೇಕಾಗಿದೆ. ಜಗತ್ತಿನ ಎಲ್ಲರೂ ಅಧ್ಯಾತ್ಮದ ಹಿನ್ನೆಲೆಯಲ್ಲಿ, ಧರ್ಮದ ನೆಲೆಯಲ್ಲಿ ತಮ್ಮ ಕಾರ್ಯಗಳನ್ನು ಮಾಡಿದರೆ, ಮಾಡುವ ಕೆಲಸವನ್ನು, ಧರ್ಮವನ್ನು ನಂಬಿ, ದೇವರ ಕೆಲಸವೆಂದು ಹೃತ್ಪೂರ್ವಕವಾಗಿ ತಿಳಿದು ಮಾಡಿದರೆ, ಯಾವ ಒಂದು ಕಾರ್ಯವನ್ನೂ ಮೇಲು ಕೀಳೆಂದು ತಿಳಿಯದೆ, ಎಲ್ಲರನ್ನೂ ಸಮಭಾವದಿಂದ ಸಮಾಜ ನೋಡುವಂತಾದರೆ, ಶ್ರೀಮಂತ ವರ್ಗ ಮತ್ತು ಸರಕಾರಗಳು ಸಾಮಾನ್ಯ ಜನರ ಕಷ್ಟಕಾರ್ಪಣ್ಯಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವಂತಾದರೆ, ಮನುಷ್ಯ ಆರ್ಥಿಕವಾಗಿ ಹೆಚ್ಚು ಹೆಚ್ಚು ಶ್ರೀಮಂತನಾಗಬೇಕೆಂಬುದರ ಬದಲು ಅಧ್ಯಾತ್ಮದಿಂದ ಆ ಶ್ರೀಮಂತಿಕೆಯೂ ಒಂದು ಪ್ರಾರಬ್ಧವೆಂದು ತಿಳಿದು, ಅದನ್ನು ಹಂಚಿ ಆಸೆಬುರುಕುತನ, ಅತ್ಯಾಶೆ, ದುರಾಸೆ, ದ್ವೇಷಗಳನ್ನು ತೊರೆದರೆ, ಕಾನೂನಿಗೆ ಪ್ರತಿಯೊಬ್ಬನೂ ಬದ್ಧನಾಗಿ ನಡೆದರೆ, ಸಮಾಜದ ಕಲ್ಯಾಣ ಖಚಿತ.

ಸಮಷ್ಟಿಯ ಕಲ್ಯಾಣದಲ್ಲಿ ಮಾತ್ರ ವ್ಯಷ್ಟಿ ಅಂದರೆ ವ್ಯಕ್ತಿಯ ಕಲ್ಯಾಣ, ಅಲ್ಲವೆ? ರಾಮಕೃಷ್ಣ ಆಶ್ರಮಗಳಂಥ ಅನೇಕ ಸಂಘ ಸಂಸ್ಥೆಗಳು ವಿವೇಕಾನಂದರ ಕಾರ್ಯಭಾರವನ್ನು ತಮ್ಮ ಜೀವನದ ಕೈಂಕರ್ಯವೆಂಬಂತೆ ನಡೆಸುತ್ತಿವೆ. ಸ್ವಾರ್ಥವಿಲ್ಲದ ಬ್ರಹ್ಮಚಾರಿಗಳನ್ನು, ಸಾಧುಸಂನ್ಯಾಸಿಗಳನ್ನು ದೇಶಸೇವೆಗೆ, ಈಶಸೇವೆಗೆ ತೊಡಗಿಸುತ್ತಿವೆ. ಇಂದಿನ ಯುವಪೀಳಿಗೆ ಶ್ರೀ ವಿವೇಕಾನಂದರ ಹಾಗೂ ಅವರಿಂದ ಪ್ರೇರಿತರಾದ ಈ ಸಂಸ್ಥೆಗಳ ಮೇಲ್ಪಂಕ್ತಿಯನ್ನು ಅನುಸರಿಸಿ ರಾಷ್ಟ್ರದ ಸರ್ವತೋಮುಖ ಏಳಿಗೆಗೆ ಖಂಡಿತ ಶ್ರಮಿಸುತ್ತದೆ ಎಂಬ ನಂಬಿಕೆ ನಮ್ಮದು. ಸರ್ವರಿಗೂ ಭಗವಂತನು ಸದ್ಬುದ್ಧಿಯನ್ನು ದಯಪಾಲಿಸಲಿ.


ಮದುವೆ ರೇಷ್ಮೆ ಸೀರೆಗಳು ಹಾಗೂ ಬಟ್ಟೆಗಳಿಗೆ
ಕರ್ನಾಟಕದ ಪ್ರಸಿದ್ಧ ಜವಳಿ ಅಂಗಡಿ
ನಂಬುಗೆಯ ಚಿಹ್ನೆ
ಎಪಿಎಸ್
ಟೆಕ್ಸ್‌ಟೈಲ್ಸ್ ಪ್ಯಾರಡೈಸ್
ಕೊಳ್ಳೇಗಾಲ ☎ : 252117
SILK MARK
ಪರಿಶುದ್ಧತೆಯ ಪ್ರತೀಕ ಈ ರೇಷ್ಮೆ ಲಾಂಛನ


With Best Compliments from:
D. GOUTAM & CO.
(Exclusive paper Merchant in the Town)
# 1915/12, Mannar's Market, Shivarampet, Mysore-570 001
Ph. : 2420946, Fax : 4263947, Mobile : 9342187404
DEALERS FOR PAPER, BOARDS, BOOKS & STATIONERIES
Mysore Paper Mills
SPB Ltd., Amaravathi,
Vidya Books, Success Books, Grey CARDS etc.
SPB
MSIL
Success
Grey
CARDS


# ಪರಮಹಂಸರು ರೂಪಿಸಿದ

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್

**ಶ್ರೀ**ರಾಮಕೃಷ್ಣ ಪರಮಹಂಸರ ಹೆಸರನ್ನು ಸ್ವಾಮಿ ವಿವೇಕಾನಂದರು ಮೊದಲು ಕೇಳಿದ್ದು ಕಾಲೇಜು ದಿನಗಳಲ್ಲಿ. ಆಗಿನ್ನೂ ಅವರು ನರೇಂದ್ರನಾಥ ಎಂಬ ಹೆಸರಿನಲ್ಲಿ ಕೊಲ್ಕತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದುತ್ತಿದ್ದರು. ಅಲ್ಲಿ ಪ್ರಿನ್ಸಿಪಾಲರಾಗಿದ್ದ ವಿಲಿಯಂ ಹೇಸ್ಟಿ ಎನ್ನುವವರು ವರ್ಡ್ಸ್‌ವರ್ತ್ ಕವಿಯ ಕವನವನ್ನು ಅವರಿಗೆ ಪಾಠ ಮಾಡುತ್ತಿದ್ದರು. ಪ್ರಕೃತಿ ಸೌಂದರ್ಯಕ್ಕೆ ಸೋತು, ಭಾವಸಮಾಧಿಯಲ್ಲಿದ್ದ ಕವಿಯನ್ನು ಕುರಿತು ಹೇಳುತ್ತ ಅವರು, ಇಂತಹ ಏಕಾಗ್ರತೆಯನ್ನು ಸಾಧಿಸಿದ ಶ್ರೀರಾಮಕೃಷ್ಣ ಪರಮಹಂಸರೆಂಬ ಓರ್ವ ಸಂನ್ಯಾಸಿ ದಕ್ಷಿಣೇಶ್ವರ ದಲ್ಲಿದ್ದಾರೆಂದು ಹೇಳಿದರು. ಅಧ್ಯಾತ್ಮದ ಬಗೆಗೆ ಸಹಜ ಕುತೂಹಲವಿದ್ದ ನರೇಂದ್ರ ಆಗಲೇ ಬಂಗಾಳದಲ್ಲಿ ಬಹುಪ್ರಚಾರದಲ್ಲಿದ್ದ ಬ್ರಹ್ಮಸಮಾಜಕ್ಕೆ ಸೇರಿದ್ದ. ಜೊತೆಗೆ ಪೂರ್ವ– ಪಶ್ಚಿಮ ದೇಶಗಳ ತತ್ತ್ವಶಾಸ್ತ್ರಗಳನ್ನು ಅಧ್ಯಯನ ಮಾಡುತ್ತಿದ್ದ. ಮನಸ್ಸಿಗೆ ಗೊಂದಲಗಳುಂಟಾದಾಗ ಪ್ರಾಜ್ಞರೊಂದಿಗೆ ಆ ಕುರಿತು ಚರ್ಚೆಯನ್ನೂ ಮಾಡುತ್ತಿದ್ದ. ಒಮ್ಮೆ ರಾಮಚಂದ್ರ ದತ್ತ ಎಂಬು ವವರು ದೇವರ ವಿಚಾರದಲ್ಲಿ ಹೆಚ್ಚು ತಿಳಿಯಬೇಕೆಂದಿದ್ದರೆ ಅದನ್ನು ಪ್ರತ್ಯಕ್ಷವಾಗಿ ಅನುಭವಿಸಿದ 'ಶ್ರೀರಾಮಕೃಷ್ಣ ಪರಮಹಂಸ' ಎಂಬುವರನ್ನು ದಕ್ಷಿಣೇಶ್ವರಕ್ಕೆ ಹೋಗಿ ಭೇಟಿಯಾಗೆಂದು ನರೇಂದ್ರನಿಗೆ ಹೇಳಿದರು. ಅದಾಗಿ ಕೆಲದಿನಗಳಲ್ಲಿಯೇ ನರೇಂದ್ರ ದಕ್ಷಿಣೇಶ್ವರದ ಕಡೆಗೆ ಹೆಜ್ಜೆ ಹಾಕಿದ.


ನರೇಂದ್ರನೆಂಬ ಸಿಡಿಲಮರಿಯಿಂದ ವಿವೇಕಾನಂದರೆಂಬ ಭವ್ಯ, ದಿವ್ಯ ವ್ಯಕ್ತಿತ್ವವನ್ನು ಮೂಡಿಸಿದ ಅಪೂರ್ವ ಶಿಲ್ಪಿ ಶ್ರೀರಾಮಕೃಷ್ಣರು. ಈ ಸುಂದರ ಆಕೃತಿಯು ಎಷ್ಟು ಅದ್ಭುತವೋ, ಅದನ್ನು ಪರಮಹಂಸರು ಕಡೆದ ಕಥನವೂ ಅಷ್ಟೇ ಅದ್ಭುತ. ಯುಗ ಜಾಗೃತಿಯನ್ನು ಉಂಟುಮಾಡಿದ ಇಬ್ಬರು ಯುಗಪ್ರವರ್ತಕರ ಮಧುರ ಬಾಂಧವ್ಯದ ಕಥೆಯನ್ನು ನವಿರಾಗಿ, ಅಚ್ಚುಕಟ್ಟಾಗಿ ನಮ್ಮ ಮುಂದೆ ಬಿಚ್ಚಿಟ್ಟಿರುವ ಲೇಖಕರು ನಿವೃತ್ತ ಬ್ಯಾಂಕ್ ಅಧಿಕಾರಿಗಳು. ಅಷ್ಟಾವಧಾನಿಗಳಾಗಿ ಪ್ರಸಿದ್ಧರಾಗಿರುವ ಇವರು ಸಾಹಿತ್ಯದ ವಿವಿಧ ಪ್ರಕಾರಗಳನ್ನು ಕುರಿತು ೫೦ ಕ್ಕೂ ಹೆಚ್ಚು ಪುಸ್ತಕಗಳನ್ನು ತುಳು ಮತ್ತು ಕನ್ನಡದಲ್ಲಿ ಬರೆದಿದ್ದಾರೆ.

ಶ್ರೀರಾಮಕೃಷ್ಣ ಪರಮಹಂಸರು ತನ್ನೆಡೆಗೆ ಬಂದ ನರೇಂದ್ರನನ್ನು ಸ್ವಾಗತಿಸಿದರು. ಬಹಳ ಪ್ರೀತಿಯಿಂದ ಮಾತನಾಡಿಸಿ, ಆತನಿಂದ ಒಂದು ಭಕ್ತಿಗೀತೆಯನ್ನು ಹಾಡಿಸಿ ಆನಂದ ಪರವಶರಾದರು. ಏಕಾಂತಕ್ಕೆ ಅವನನ್ನು ಕರೆದೊಯ್ದು,"ನೀನು ನಾರಾಯಣಾಂಶ ಸಂಭೂತನಾದ ನರನೆಂಬ ಮಹರ್ಷಿ. ಈ ಪ್ರಪಂಚದಲ್ಲಿ ದುಃಖಶಮನ ಮಾಡಲು ಅವತರಿಸಿರುವೆ" ಎಂದು ಹೇಳಿದರು. ದೇವರ ವಿಷಯವನ್ನು ತಿಳಿದುಕೊಳ್ಳಲು ಬಂದ ನರೇಂದ್ರನಿಗೆ ಶ್ರೀರಾಮಕೃಷ್ಣರು ತನ್ನನ್ನೇ ದೇವರ ಅಂಶವೆಂದು ಕರೆದಾಗ ಕಸಿವಿಸಿ ಯಾಯಿತು. "ನೀವು ದೇವರನ್ನು ನೋಡಿದ್ದೀರಾ?" ಎಂದು ಪರಮಹಂಸರನ್ನು ನರೇಂದ್ರ ಕೇಳಿಯೇಬಿಟ್ಟ. ಆಗ ಅವರು, "ನಾನು ನೋಡಿದ್ದೇನೆ, ಬೇಕಾದರೆ ನಿನಗೂ ತೋರಿಸುತ್ತೇನೆ" ಎಂದರು! ಆದರೆ ನರೇಂದ್ರನ ವೈಚಾರಿಕ ದೃಷ್ಟಿಕೋನ ಇಂತಹ ಮಾತುಗಳನ್ನು ಮೊದಲ ಭೇಟಿಯಲ್ಲೇ ಒಪ್ಪಿಕೊಳ್ಳಲು ಹಿಂಜರಿಯಿತು. ಪರಮಹಂಸರು ನರೇಂದ್ರನಿಗೆ ಮಿಠಾಯಿ ಹಣ್ಣುಗಳನ್ನು ತುಂಬಾ ಪ್ರೀತಿಯಿಂದ ತಿನ್ನಲು ಕೊಟ್ಟರು. ಅವರಿಂದ ಹೇಗಾದರೂ ಬಿಡಿಸಿಕೊಂಡರೆ ಸಾಕೆಂದು ನರೇಂದ್ರನಿಗೆ ತೋರಿತು. "ಆಗಾಗ್ಗೆ ಇಲ್ಲಿಗೆ ಬರುತ್ತಿರು" ಎಂದು ಅವರು ಹೇಳಿದ ಕೂಡಲೆ, "ಆಗಲಿ" ಎಂದಷ್ಟೇ ಹೇಳಿ ನರೇಂದ್ರ ಅಲ್ಲಿಂದ ಹೊರಟನು.



ಇದು ಗುರು ಶಿಷ್ಯರ ಮೊದಲ ಸಮಾಗಮ. ಆದರೆ ಇದಕ್ಕಿಂತ ಮೊದಲೇ ಕೊಲ್ಕತಾದ ಭಕ್ತರೊಬ್ಬರ ಮನೆಯಲ್ಲಿ ನರೇಂದ್ರನ ಭಕ್ತಿಗಾನ ಸುಧೆಯನ್ನು ಪರಮಹಂಸರು ಕೇಳಿದ್ದರು. ತಮ್ಮ ದಿವ್ಯಜ್ಞಾನದಲ್ಲಿ ಸಪ್ತರ್ಷಿಲೋಕದ ಚೇತನವೊಂದು ಧರೆಗೆ ಇಳಿದುದನ್ನು ಕಂಡು ಅದು ನರೇಂದ್ರನೇ ಎಂದು ನಿಶ್ಚಯಿಸಿಕೊಂಡಿದ್ದರು. ಎರಡನೆಯ ಬಾರಿಗೆ ಪರಮಹಂಸರಲ್ಲಿಗೆ ನರೇಂದ್ರ ಬಂದಾಗ, ಒಂದು ಅಪೂರ್ವ ಅನುಭವ ಅವನಿಗಾಯಿತು. ಪರಮಹಂಸರು ತಮ್ಮ ಬಲಗಾಲನ್ನು ನರೇಂದ್ರನ ಮೇಲಿಟ್ಟಾಗ ಅವನಿಗೆ ಸಕಲ ವಿಶ್ವವೂ ಮಾಯವಾದಂತೆ ಭಾಸವಾಯಿತು. ತಾನು ಸಾಯುತ್ತಿದ್ದೇನೆಂದು ಭಾವಿಸಿ ಒಮ್ಮೆಲೇ ಕೂಗಿಕೊಂಡ. ಅಷ್ಟಕ್ಕೇ ನಿಲ್ಲಿಸಿದ

# ಸ್ವಾಮಿ ವಿವೇಕಾನಂದರು



ಪರಮಹಂಸರು ತಮ್ಮ ದಿವ್ಯ ಕರಸ್ಪರ್ಶದಿಂದ ಅವನನ್ನು ಶಾಂತಗೊಳಿಸಿದರು. ಈ ಅನುಭವದಿಂದ ನರೇಂದ್ರನಿಗೆ ಇನ್ನಷ್ಟು ಗೊಂದಲ ಉಂಟಾಯಿತು. ಅವರಿಗೆ ಇಂದ್ರ ಜಾಲವಿದ್ಯೆ ಕರಗತವಾಗಿರಬಹುದೇ ಎಂಬ ಸಂದೇಹ ಮೂಡಿತು. ಮತ್ತೊಮ್ಮೆ ಅವರನ್ನು ಚೆನ್ನಾಗಿ ವಿಮರ್ಶಿಸಬೇಕೆಂದು ನಿರ್ಧರಿಸಿ ಹಿಂತಿರುಗಿದ.

ಮೂರನೆ ಬಾರಿಯ ಭೇಟಿಯಲ್ಲಿ ಅವರಿಬ್ಬರೂ ಹೊರಗಡೆ ವಾಯುವಿಹಾರಕ್ಕೆ ಹೊರಟರು. ನರೇಂದ್ರನನ್ನು ಪರಮಹಂಸರು ಸ್ಪರ್ಶಿಸಿ ಸಂಪೂರ್ಣವಾಗಿ ಪರವಶಗೊಳಿಸಿ ಕೆಲವು ಪ್ರಶ್ನೆಗಳನ್ನು ಕೇಳಿದರು. "ನೀನು ಯಾರು? ಯಾವ ಉದ್ದೇಶಕ್ಕಾಗಿ ಬಂದಿರುವೆ? ಎಷ್ಟು ಕಾಲ ಇರುತ್ತೀಯ?" ಎಂಬ ಪರಮ ಹಂಸರ ಪ್ರಶ್ನೆಗಳಿಗೆ ನರೇಂದ್ರನಿಂದ ಸಮರ್ಪಕವಾದ ಉತ್ತರ ಬಂದಿತು.

ಆಗ ಪರಮಹಂಸರಿಗೆ ತಾನು ಸಮಾಧಿಯಲ್ಲಿ ಕಂಡ ಋಷಿಚೇತನವೇ ನರೇಂದ್ರನೆಂಬುದು ಸ್ಪಷ್ಟವಾಯಿತು. ನರೇಂದ್ರನಿಗೂ ಪರಮಹಂಸರಲ್ಲಿ ಗುರುಭಾವನೆ ಬಲಗೊಂಡಿತು. ನಿಧಾನವಾಗಿ ಅಧ್ಯಾತ್ಮದ ಅನಂತ ಸಿದ್ಧಿಗೆ ತನ್ನನ್ನು ತಾನು ತೆರೆದುಕೊಂಡ.

ಪರಮಹಂಸರ ಪರಿಚಯವಾದ ಬಳಿಕ ಸುಮಾರು ಐದು ವರ್ಷಗಳ ಕಾಲ ನರೇಂದ್ರನಾಥ ಆಗಾಗ್ಗೆ ಅವರನ್ನು ನೋಡಲು ದಕ್ಷಿಣೇಶ್ವರಕ್ಕೆ ಬರುತ್ತಿದ್ದ. ಅವರಿಬ್ಬರ ನಡುವೆ ಅಗಾಧವಾದ ಆತ್ಮೀಯತೆ ಬೆಳೆಯುತ್ತಾ ಹೋಯಿತು. ನರೇಂದ್ರನ ವಿಮರ್ಶಕ ಮನಸ್ಸನ್ನು ತಿಳಿದ ಪರಮಹಂಸರು ತುಂಬ ತಾಳ್ಮೆಯಿಂದಲೇ ಅವನನ್ನು ನೋಡಿಕೊಂಡರು. ವಿಗ್ರಹಾರಾಧನೆಯನ್ನು ಒಪ್ಪಿಕೊಳ್ಳದ ನರೇಂದ್ರನಿಗೆ ಪರಮಹಂಸರು,"ಸತ್ಯದ ದೇಗುಲಕ್ಕೆ ಹಲವು ಬಾಗಿಲು ಗಳಿವೆ. ನಾನು ಮಾತ್ರ ಸರಿಯೆಂದು, ಇತರರು ಸರಿಯಿಲ್ಲವೆಂದು ಭಾವಿಸ ಬಾರದು. ನೀನು ಒಪ್ಪದೆ ಇರುವುದನ್ನು ಸತ್ಯವಲ್ಲವೆಂದು ಹೇಳಲೂಬಾರದು" ಎಂದು ಹೇಳಿ ಅವನಲ್ಲಿ ವಿಚಾರದೀಪ್ತಿಯನ್ನು ಹಚ್ಚಿದರು.

ನರೇಂದ್ರನನ್ನು ತುಂಬಾ ದಿನಗಳ ಕಾಲ ಅಗಲಿರಲು ಪರಮಹಂಸರಿಗೆ ಸಾಧ್ಯವೇ ಆಗುತ್ತಿರಲಿಲ್ಲ. ಅವನೇನಾದರೂ ತನ್ನಲ್ಲಿಗೆ ಬರುವುದು ವಿಳಂಬವಾದರೆ ಯಾರ ನ್ನಾದರೂ ಕಳುಹಿಸಿ ಅವನನ್ನು ಕರೆಸಿಕೊಳ್ಳುತ್ತಿದ್ದರು. ಒಮ್ಮೆ ನರೇಂದ್ರನು ತನ್ನ ಗೆಳೆಯ ರಾಖಾಲ ಎಂಬುವನೊಂದಿಗೆ ದಕ್ಷಿಣೇಶ್ವರಕ್ಕೆ ಬಂದ. ಆಗ ಪರಮ ಹಂಸರು ದೇವಿಯ ದೇಗುಲಕ್ಕೆ ಹೊರಟಿದ್ದರು. ನರೇಂದ್ರ ಮತ್ತು ರಾಖಾಲರು ಅವರನ್ನೇ ಹಿಂಬಾಲಿಸಿದರು. ಪರಮಹಂಸರು ದೇವಿಯ ವಿಗ್ರಹಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಿದಾಗ, ರಾಖಾಲನೂ ನಮಸ್ಕರಿಸಿ ಬಿಟ್ಟ. ಇದು ಬ್ರಹ್ಮಸಮಾಜದ ತತ್ತ್ವಗಳಿಗೆ ವಿರೋಧವಾದುದರಿಂದ ನರೇಂದ್ರನಿಗೆ ಸಿಟ್ಟು ಬಂತು. ಆಗ ಪರಮಹಂಸರು ಮಧ್ಯ ಪ್ರವೇಶಿಸಿ, "ದೇವರು ಸರ್ವಾಂತರ್ಯಾಮಿಯಲ್ಲವೆ? ಅವನು ಎಲ್ಲೆಡೆ ಇರು ವಂತೆ ವಿಗ್ರಹದಲ್ಲೂ ಇರುವನಲ್ಲವೆ?" ಎಂದು ಕೇಳಿದರು. ಇದ ರಿಂದ ನರೇಂದ್ರನ ಮನಸ್ಸಿನಲ್ಲಿ ಪರಮಹಂಸರು ಹಚ್ಚಿದ ಅಧ್ಯಾತ್ಮದ ಕಿಡಿ ಮತ್ತಷ್ಟು ಪ್ರಖರವಾಯಿತು.

ಶ್ರೀಕೃಷ್ಣನನ್ನು ಅತೀವವಾಗಿ ಪ್ರೀತಿಸುವ ರಾಧಾಭಕ್ತಿಯನ್ನು